PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಾರಿಗೆ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ ದಿನಾಂಕ : DATE : 22/09/2019

# ಟ್ರಾಫಿಕ್ ದಂಡ ಕೊನೆಗೂ ಇಳಿಕೆ

## ಡ್ರಿಂಕ್ & ಡ್ರೈವ್ ದಂಡ ಇಳಿಕೆ ಇಲ್ಲ

## ಹೆಲ್ಮೆಟ್‌ರಹಿತ ಪ್ರಯಾಣಕ್ಕೆ 500 ರು.

## ರಾಜ್ಯ ಸರ್ಕಾರದಿಂದ ಅಧಿಕೃತ ಆದೇಶ

22/9/19

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಸಾರ್ವಜನಿಕರಿಂದ ತೀವ್ರ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಸಂಚಾರ ನಿಯಮ ಉಲ್ಲಂಘನೆಗೆ ವಿಧಿಸುತ್ತಿದ್ದ ದುಬಾರಿ ದಂಡವನ್ನು ರಾಜ್ಯ ಸರ್ಕಾರ ಕಡಿತಗೊಳಿಸಿ ಶನಿವಾರ ಅಧಿಸೂಚನೆ ಹೊರಡಿಸಿದೆ. ಆದರೆ, ಕುಡಿದು ವಾಹನ ಚಾಲನೆ, ಅಪಾಯಕಾರಿ ಚಾಲನೆ, ರೇಸ್ ಹಾಗೂ ವೇಗದ ಪರೀಕ್ಷೆ, ವಾಹನ ಮಾರ್ಪಾಡಿನಂತಹ ನಿಯಮ ಉಲ್ಲಂಘನೆಗೆ ದಂಡ ಕಡಿತಗೊಳಿಸಿಲ್ಲ. ಸಾರ್ವಜನಿಕರು, ಜನಪ್ರತಿನಿಧಿಗಳ ವಿರೋಧ ಹಾಗೂ ಒತ್ತಾಯಕ್ಕೆ ಮಣಿದಿರುವ ರಾಜ್ಯ ಸರ್ಕಾರ ಕೇಂದ್ರ ಮೋಟಾರು ವಾಹನ ಕಾಯ್ದೆಯ 24 ನಿಯಮಗಳ ಪೈಕಿ ಬಹುತೇಕ ನಿಯಮಗಳ ಉಲ್ಲಂಘನೆಯ ದಂಡದ ಮೊತ್ತವನ್ನು ಇಳಿಕೆ ಮಾಡಿದೆ. ➘14

### ಯಾವ್ಯಾವ ದಂಡ ಇಳಿಕೆ ?

| ನಿಯಮ ಉಲ್ಲಂಘನೆ | ಹಿಂದಿನ ದಂಡ | ಪರಿಷ್ಕೃತ ದಂಡ |
|---|---|---|
| ಕಾನೂನು ಸೂಚನೆ ಪಾಲಿಸದಿರುವುದು | ₹2000 | ₹1000 |
| ಅತಿವೇಗದ ಚಾಲನೆ | ₹2000ರಿಂದ ₹4000 | ₹1000ರಿಂದ ₹2000 |
| ಅನಧಿಕೃತ ವ್ಯಕ್ತಿಗಳಿಂದ ಚಾಲನೆ | ₹5000 | ₹1000ರಿಂದ ₹5000 |
| ಡಿಎಲ್ ಇಲ್ಲದೆ ಚಾಲನೆ | ₹5000 | ₹1000ರಿಂದ ₹5000 |
| ಅಪಾಯಕಾರಿ ಚಾಲನೆ | ₹5000ರಿಂದ ₹10000 | ₹1500ರಿಂದ ₹10000 |
| ನೋಂದಣಿ ಇಲ್ಲದ ವಾಹನ | ₹5000ರಿಂದ ₹10000 | ₹2000ರಿಂದ ₹5000 |
| ರಹದಾರಿ ಇಲ್ಲದ ವಾಹನ ಬಳಕೆ | ₹10000 | ₹5000 |
| ನಿಗದಿಗಿಂತ ಹೆಚ್ಚು ತೂಕ | ₹20000 | ₹5000 |
| ಸುರಕ್ಷಿತವಲ್ಲದ ವಾಹನ ಬಳಕೆ | ₹10000 | ₹1500ರಿಂದ ₹3000 |
| ಸೀಟ್ ಬೆಲ್ಟ್ ಧರಿಸದಿದ್ದರೆ | ₹1000 | ₹500 |
| ಬೈಕ್ ಸವಾರರಿಂದ ಸುರಕ್ಷೆ ಉಲ್ಲಂಘನೆ | ₹1000 | ₹500 |
| ಹೆಲ್ಮೆಟ್ ಧರಿಸದಿರುವುದು | ₹1000 | ₹500 |
| ತುರ್ತು ವಾಹನಕ್ಕೆ ದಾರಿ ಬಿಡದಿರುವುದು | ₹10000 | ₹1000 |
| ನಿಶ್ಶಬ್ದ ವಲಯದಲ್ಲಿ ಹಾರ್ನ್ | ₹1000ರಿಂದ ₹2000 | ₹500 |
| ವಿಮೆ ಇಲ್ಲದೆ ವಾಹನ ಚಾಲನೆ | ₹2000ರಿಂದ ₹4000 | ₹1000 |
| ಸಾಮಾನ್ಯ ಅಪರಾಧಗಳು | ₹500ರಿಂದ ₹1500 | ₹500ರಿಂದ ₹1000 |

**ಯಾವ ದಂಡ ಬದಲಾವಣೆ ಇಲ್ಲ?** ➘14

10